**ದಿನಾಂಕಃ12.12.2023 ರಂದು ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.**

**ಪಾಟಿಸವಾಲುಃ ಪ್ರತಿವಾದಿ ಪರ ಶ್ರೀ. ಆರ್.ಕೆ., ವಕೀಲರಿಂದಃ**

ಪ್ರತಿವಾದಿ ನನ್ನ ನಿವೇಶನಕ್ಕೆ ಅಕ್ರಮವಾಗಿ ಪ್ರವೇಶಿಸಲು ಪ್ರಯತ್ನಿಸಿದ ಕಾರಣ ನಾನು ಈ ಪ್ರತಿವಾದಿಯ ವಿರುದ್ಧ ಈ ದಾವೆ ಹೂಡಿರುತ್ತೇನೆ. ನಾನು ಪಂಚಾಯಿತಿಗೆ ಪ್ರತಿವಾದಿ ನನ್ನ ನಿವೇಶನದಲ್ಲಿ ಹುಲ್ಲುವಾಮೆ ಹಾಕಿರುವುದಾಗಿ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ನಿವೇಶನಲ್ಲಿ ಹುಲ್ಲುವಾಮೆ ಹಾಕಲು ಪ್ರಯತ್ನಿಸಿರುವುದಾಗಿ ಹೇಳಿ ನಾನು ಈ ದಾವೆಯಲ್ಲಿ ಪ್ರತಿವಾದಿಯ ವಿರುದ್ಧ ಮಧ್ಯಂತರ ಆದೇಶ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಂತರ ಪ್ರತಿವಾದಿ ಬಂದು ತಕರಾರು ಸಲ್ಲಿಸಿದ ನಂತರ ಸದರಿ ಮಧ್ಯಂತರ ಆದೇಶ ವಜಾಗೊಂಡಿರುತ್ತದೆ ಎಂದರೆ ಸರಿ. ನಂತರ ಸದರಿ ಮಧ್ಯಂತರ ಅರ್ಜಿ ವಜಾ ಆಗಿರುವುದನ್ನು ಪ್ರಶ್ನಿಸಿ ಕೋಲಾರದ ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲದಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಮೇಲ್ಮನವಿ ಕೂಡ ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು.)

ಓದಿ ಹೇಳಿ ಕೇಳಿ ಸರಿಯಾಗಿದೆ.

(ಸಚಿನ್.ಹೆಚ್.ಆರ್)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.